# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಪ.ವಿ/ಕು(ಮೌ)/2019 – 20

ಕುಲಸಚಿವರು (ಮೌ) ರವರ ಕಛೇರಿ,
ಪರೀಕ್ಷಾ ಭವನ, ಜ್ಞಾನಭಾರತಿ ಆವರಣ,
ಬೆಂಗಳೂರು – 560056.

ದಿನಾಂಕ: 01.06.2019

ಗೆ,

ಎಲ್ಲಾ ಮುಖ್ಯಸ್ಥರುಗಳು,
ಸ್ನಾತಕೋತ್ತರ ಪದವಿ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560056.

ಮಾನ್ಯರೇ,

ವಿಷಯ: ಪರಿಶಿಷ್ಟ ಜಾತಿ/ಪಂಗಡ ಸ್ನಾತಕೋತ್ತರ ಪದವಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಶುಲ್ಕದಿಂದ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1. ವಿ.ವಿ. ಅಧಿಸೂಚನೆ ಸಂಖ್ಯೆ: ACA IV/A1/1Yr/PG/ UGC/ DGC/ Fee/ 2018 – 19 ದಿನಾಂಕ: 06.07.2018.
2. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಬಿವೃದ್ಧಿ ವಿಭಾಗರವರ ಟಿಪ್ಪಣಿ ದಿನಾಂಕ: 28.05.2019.
3. ಕುಲಪತಿಗಳ ಟಿಪ್ಪಣಿ ದಿನಾಂಕ; 24.05.2019. 2.1.6.19

***

ಮಾನ್ಯ ಕುಲಪತಿಗಳ ಟಿಪ್ಪಣಿ ದಿನಾಂಕ: 24.05.2019 ಹಾಗೂ ನಿರ್ದೇಶಕರು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಟಿಪ್ಪಣಿ ದಿನಾಂಕ: 28.05.2019ನ್ನು ಹಾಗೂ ಕುಲಸಚಿವರು ಆಡಳಿತ ಇವರ ಅಧಿಸೂಚನೆ ದಿನಾಂಕ: 06.07.2018ನ್ನು ಪರಿಶೀಲಿಸಲಾಗಿದೆ. ಈ ಆದೇಶಗಳನ್ವಯ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನದಲ್ಲಿ ಪರೀಕ್ಷಾ ಶುಲ್ಕ ಘಟಿಕೋತ್ಸವ ಶುಲ್ಕ ಮತ್ತು ಟ್ಯೂಷನ್ ಶುಲ್ಕಗಳು ಒಟ್ಟಾಗಿ ಈಗಾಗಲೇ 2018 – 19ನೇ ಸಾಲಿಗೆ ಮಂಜೂರಾಗಿದೆ ಎಂದು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗದಿಂದ ಮಾಹಿತಿಯನ್ನು ನೀಡಿದ್ದಾರೆ. ಇದರ ಪ್ರಕಾರ ವಿವಿಧ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಶುಲ್ಕ ಕಟ್ಟುವಂತೆ ಒತ್ತಾಯ ಮಾಡಬಾರದೆಂದು ಸರ್ಕಾರದ ಆದೇಶವಿರುವುದರಿಂದ ಈ ವಿದ್ಯಾರ್ಥಿಗಳಿಗೆ ಸದರಿ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

1/6/19

ಕುಲಸಚಿವರು (ಮೌಲ್ಯಮಾಪನ)

ಪ್ರತಿಗಳು:

1. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಶ್ರೀ. ಮಹೇಶ್, ಇನ್‌ವ್ಯಾಕ್ ಪ್ರೈ. ಲಿಮಿಟೆಡ್, ಬೆಂಗಳೂರು